**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಸಿಂದಗಿ.**

**ಉಪಸ್ಥರು: ಶ್ರೀ ನಾಗೇಶ ಕೆ. ಮೊಗೇರ.,**
**ಬಿ.ಕಾಂ, ಎಲ್ .ಎಲ್.ಎಮ್**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.**

**ಅಸಲು ದಾವಾ ನಂ. ಃ 144/2025**

**ದಿನಾಂಕ 13 ನೇ ಫೆಬ್ರುವರಿ-2026.**

**ವಾದಿಃ**

1. ನಾಗಮ್ಮ ಗಂ.ಪರಶುರಾಮ ನಾರಾಯಣಕರ,
   ವಯಾ ಃ 32 ವರ್ಷ , ಉಃ ಮನೆಕೆಲಸ,

2. ಸೋಮನಾಥ ತಂ.ಪರಶುರಾಮ ನಾರಾಯಣಕರ,
   ವಯಾ ಃ 03 ವರ್ಷ , ಉಃ --
   ಇಬ್ಬರು ಸಾಃ ಸಿಂದಗಿ
   (ವಾದಿ ನಂ.2 ರವರು ಅ.ಪಾ ಇದ್ದು,
   ಅವರ ಅ.ಪಾ.ಕ ಖಾಸ ತಾಯಿ ವಾದಿ ನಂ.1)

(ಶ್ರೀಮತಿ ಬಿ.ಜಿ.ಎಮ್ ವಕೀಲರು )

**ಃ ವಿರುದ್ಧ ಃ**

**ಪ್ರತಿವಾದಿಯರು**

1. ಪರಶುರಾಮ ತಂ.ಮಲ್ಲಿಕಾರ್ಜುನ ನಾರಾಯಣಕರ,
   ವಯಾ ಃ 35 ವರ್ಷ, ಉ ಃ ಖಾಸಗಿ ಗುತ್ತಿಗೆದಾರ,

2. ಅಂಬಿಕಾ ತಂ.ಮಲ್ಲಿಕಾರ್ಜುನ ನಾರಾಯಣಕರ,
   ವಯಾ ಃ 40 ವರ್ಷ, ಉ ಃ ಮನೆಕೆಲಸ,
   ಇಬ್ಬರು ಸಾಃ ಮದೀನಾನಗರ ,ಸಿಂದಗಿ.

( ಶ್ರೀ. ಎ.ಎಸ್.ಡಿ ವಕೀಲರು )

**I.A.No.II**

**ಅರ್ಜಿದಾರರು/ವಾದಿಯರು**

ನಾಗಮ್ಮ ಗಂ.ಪರಶುರಾಮ ನಾರಾಯಣಕರ ಮತ್ತು ಇನ್ನೊಬ್ಬರು

**ಃ ವಿರುದ್ಧ ಃ**

**ಎದುರುದಾರರು / ಪ್ರತಿವಾದಿಯರು**

ಪರಶುರಾಮ ತಂ.ಮಲ್ಲಿಕಾರ್ಜುನ ನಾರಾಯಣಕರ ಮತ್ತು ಇನ್ನೊಬ್ಬರು.

**ವಾದಿಯರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ನಂ.2 ರ ಮೇಲೆ ಆದೇಶ**

ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ದಾವೆಯ ಅಂತಿಮ ವಿಲೇಯವರೆಗೆ ಸಿಂದಗಿ ಪಟ್ಟಣದ, ವಾರ್ಡ ನಂ.22 ರಲ್ಲಿರುವ ಮನೆ ಆಸ್ತಿ ಟಿ.ಎಮ್.ಸಿ ನಂ.1497 ನ್ನು ಮಾರಾಟ, ಒತ್ತೆ ವಗೈರೆ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ಮನಾಯಿ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರರು ತನ್ನ ಅರ್ಜಿಯ ಜೊತೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯಲ್ಲಿ ತಮಗೆ ಪಾಲು ಇದ್ದು, ಪ್ರತಿವಾದಿ ನಂ.1 ರವರು ದಾವಾ ಆಸ್ತಿಯು ಅವರ ಹೆಸರಿನಲ್ಲಿರುವುದನ್ನು ದುರೂಪಯೋಗಪಡಿಸಿಕೊಂಡು ಮಾರಾಟ ಮಾಡುವ ತಜಿವಿಜಿಯಲ್ಲಿರುತ್ತಾರೆ. ಸದರ ದಾವೆಯು ತನ್ನ ಹಾಗೂ ತನ್ನ ಮಗನ ಹಿತಾಸಕ್ತಿ ಒಳಗೊಂಡಿರವುದರಿಂದ ತಾತ್ಕಾಲಿಕ ಮನಾಯಿ ಆದೇಶ ಮಾಡುವುದರಿಂದ

ಪ್ರತಿವಾದಿಯರಿಗೆ ಯಾವುದೇ ರೀತಿಯ ಹಾನಿ ಉಂಟಾಗುವುದಿಲ್ಲ ಎಂದು ಹೇಳುತ್ತಾ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವಂತೆ ಪ್ರಾರ್ಥಿಸಿರುತ್ತಾರೆ.

3. ಪ್ರತಿವಾದಿ/ ಎದುರುದಾರರು ಜ್ಞಾಪನವನ್ನು ಸಲ್ಲಿಸಿ, ಪ್ರತಿವಾದಿ ನಂ.1 ರವರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಸದರಿ ಮಧ್ಯಂತರ ಅರ್ಜಿಗೆ ತಕರಾರರು ಎಂದು ಪರಿಗಣಿಸುವಂತೆ ಪ್ರಾರ್ಥಿಸಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ವಾದಿಯರು ಪ್ರತಿವಾದಿಯರ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧ ಹೊಂದಿರುವುದಿಲ್ಲ. ವಾದಿ ನಂ.1 ರವರು ಪ್ರತಿವಾದಿ ನಂ.1 ರವರ ಮನೆಯಲ್ಲಿ ಬಾಡಿಗೆ ರೀತಿಯಲ್ಲಿ ವಾಸವಾಗಿದ್ದರು . ದಾವಾ ಮನೆ ಆಸ್ತಿಯು ಪ್ರತಿವಾದಿಯರ ಅಜ್ಜನಾದ ಸೋಮಣ್ಣರವರಿಗೆ ಸರಕಾರ ನೀಡಿರುವ, ಟೆನೆಂಟ ಮೂಲಕ ಬಂದಿರುವ ಆಸ್ತಿಯಾಗಿರುತ್ತದೆ. ಸದರಿ ಸೋಮಣ್ಣರವರು ಮರಣ ಹೊಂದಿದ್ದು, ಸದರಿ ಸೋಮಣ್ಣರವರ ಮಗಳಾದ ಪ್ರತಿವಾದಿಯರ ತಾಯಿಯು ಕೂಡ ಮರಣಹೊಂದಿರುವುದರಿಂದ, ದಾವಾ ಆಸ್ತಿಯು ಪ್ರತಿವಾದಿ ನಂ.1 ರವರಿಗೆ ವಾರಸಾ ಮೂಲಕ ಬಂದಿರುತ್ತದೆ. ಸದರಿ ಆಸ್ತಿಯು ಪ್ರತಿವಾದಿ ನಂ.1 ರವರ ತಾಯಿಯ ಸ್ತ್ರಿಧನ ಆಸ್ತಿಯಾಗಿರುತ್ತದೆ. ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ. ವಾದಿಯರು ಸುಳ್ಳು ಸಂಗತಿಗಳನ್ನು ಹೇಳಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸುವಂತೆ ಪ್ರಾರ್ಥಿಸಿರುತ್ತಾರೆ.

4. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1. ದಾವೆಯು ಮೇಲ್ನೋಟಕ್ಕೆ ಉತ್ತಮವಾದ ದಾವೆ ಎಂದು ವಾದಿಯು ರುಜುವಾತುಪಡಿಸುವರೇ ?

2. ದಾವೆಯಲ್ಲಿ ಅನುಕೂಲತೆಯ ಒಲವು ತನ್ನ ಪರ ಇದೆ ಎಂದು ವಾದಿಯು ರುಜುವಾತುಡಿಸುವರೇ?

3. ಅರ್ಜಿಯನ್ನು ಪುರಸ್ಕರಿಸದಿದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯು ರುಜುವಾತುಪಡಿಸುವರೇ ?

4. ಯಾವ ಆದೇಶ ?

5. ಉಭಯ ಪಕ್ಷಗಾರರ ವಾದವನ್ನು ಆಲಿಸಿದ್ದೇನೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದೇನೆ .

6. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

| | | |
|---|---|---|
| ಅಂಶ.ನಂ:.1 ರಿಂದ 3 | : | ನಕಾರಾತ್ಮಕವಾಗಿ |
| ಅಂಶ.ನಂ. 4 | : | ಅಂತಿಮ ಆದೇಶದಂತೆ,<br>ಈ ಕೆಳಗಿನ ಕಾರಣಗಳಿಗಾಗಿ....... |

**<u>ಕಾರಣಗಳು ಃ</u>**

**7.** **<u>ಅಂಶ ನಂ.1 ರಿಂದ 3 ಃ</u>** ಈ ಮೂರು ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿದ್ದು, ಸಮಾನ ಚರ್ಚೆಯಿಂದ ನಿರ್ಧರಿಸಬೇಕಾಗಿರುವುದರಿಂದ , ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ದಾವೆಯ ಅಂತಿಮ ವಿಲೇಯವರೆಗೆ ಸಿಂದಗಿ ಪಟ್ಟಣದ, ವಾರ್ಡ ನಂ.22 ರಲ್ಲಿರುವ ಮನೆ ಆಸ್ತಿ ಟಿ.ಎಮ್.ಸಿ ನಂ.1497 ನ್ನು ಮಾರಾಟ, ಒತ್ತೆ ವಗೈರೆ ಮಾಡದಂತೆ ಪ್ರತಿವಾದಿಯರ ವಿರುದ್ದ ತಾತ್ಕಾಲಿಕ ಮನಾಯಿ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

8. ವಾದಿಯರು ಈ ದಾವೆಯನ್ನು ಸಲ್ಲಿಸಿ ದಾವಾ ಆಸ್ತಿ ಸಿಂದಗಿ ಪಟ್ಟಣದ ವಾರ್ಡ ನಂ.22 ರಲ್ಲಿರುವ ಮನೆ ಆಸ್ತಿ ನಂ.1497 ತಮ್ಮ ಹಾಗೂ ಪ್ರತಿವಾದಿಯರ ಏಕತ್ರ ಕುಟುಂಬದ ಆಸ್ತಿಯಾಗಿದ್ದು ತಮಗೆ 1/3 ಪಾಲು ಇದೆ ಎಂದು ಹೇಳಿರುತ್ತಾರೆ. ಮುಂದುವರೆದು, ಪ್ರತಿವಾದಿ ನಂ.1 ರವರು ವಾದಿ ನಂ.1 ರವರ ಗಂಡ ಎಂದು ಮತ್ತು ವಾದಿ ನಂ.2 ರವರ ತಂದೆ ಎಂದು ಹೇಳಿರುತ್ತಾರೆ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯರು ಮತ್ತು ಪ್ರತಿವಾದಿಯರ ನಡುವಿನ ಸಂಬಂಧವನ್ನು ಅಲ್ಲಗಳೆದು, ವಾದಿಯರು ಪ್ರತಿವಾದಿಯರ ಕುಟುಂಬಕ್ಕೆ ಯಾವುದೇ ರೀತಿಯಿಂದಲೂ ಸಂಬಂಧವನ್ನು ಹೊಂದಿರುವುದಿಲ್ಲ ಎಂದು ಹೇಳಿರುತ್ತಾರೆ.

9. ವಾದಿಯರು ದಾವಾ ಆಸ್ತಿಯ ಆಸ್ತಿ ತೆರಿಗೆಯ ಬೇಡಿಕೆ , ಸಂಗ್ರಹಣೆ , ಬಾಕಿ ಹಾಗೂ ನಮೂನೆ ನಂ.3 ನ್ನೊಳಗೊಂಡ ರಿಜಿಸ್ಟರನ ಪ್ರತಿಯನ್ನು ಹಾಜರುಪಡಿಸಿದ್ದು , ಪ್ರತಿವಾದಿ ನಂ.1 ರವರ ಹೆಸರಿನಲ್ಲಿರುತ್ತದೆ. ಈ ಆಸ್ತಿಯು ಪ್ರತಿವಾದಿ ನಂ.1 ರವರಿಗೆ ಹೇಗೆ ಬಂದಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಈ ಹಂತದಲ್ಲಿ ಈ ಆಸ್ತಿಯು ಪ್ರತಿವಾದಿ ನಂ.1 ರವರ ಸ್ವಯಾರ್ಜಿತ ಆಸ್ತಿ ಎನ್ನುವುದು ಮೇಲ್ನೋಟಕ್ಕೆ

ಕಂಡು ಬರುತ್ತದೆ. ಅಲ್ಲದೇ , ವಾದಿಯರು ಪ್ರತಿವಾದಿ ನಂ.1 ರವರ ನಡುವಿನ ಸಂಬಂಧವು ವಿವಾದದಲ್ಲಿ ಇರುತ್ತದೆ. ಹೀಗಿರುವಾಗ ವಾದಿಯರ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಪ್ರಕರಣ ಮತ್ತು ಅನುಕೂಲತೆಯ ಒಲವು ಇರುವುದಿಲ್ಲ. ವಾದಿಯರು ಪ್ರಾರ್ಥಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದಿದ್ದರೆ ವಾದಿಯರಿಗೆ ತೊಂದರೆ ಉಂಟಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. **ಅಂತೆಯೇ ಅಂಶ ನಂ.1 ರಿಂದ ಅಂಶ ನಂ.3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

10. **ಅಂಶ.ನಂ. 4 :** ಅಂಶ ನಂ. 1 ರಿಂದ 3 ಕ್ಕೆ ನೀಡಿರುವ ಕಾರಣ ಮತ್ತು ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ**

ಅರ್ಜಿದಾರರು/ ವಾದಿಯರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ನಂ.2 ನ್ನು _ ತಿರಸ್ಕರಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ಸಹಿ ಮಾಡಿ ದಿನಾಂಕ 13 ನೇ ಫೆಬ್ರುವರಿ- 2026 ರಂದು ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಉಚ್ಚರಿಸಲಾಯಿತು)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಸಿಂದಗಿ.